ದಿನಾಂಕ : 19.06.2023
ಅಸಲು ದಾವೆ: 56/2017
**ಪಿ.ಡಬ್ಲ್ಯೂ:** 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು : ಪ್ರತಿವಾದಿ 6 ರಿಂದ 9 ರ ಪರ ವಕೀಲರಾದ ಶ್ರೀ ಜಿ.ಕೆ.ಸಿ ರವರಿಂದ :**

ನನ್ನ ತಂದೆಯ ತಂದೆ ಹೆಸರು ನಿಂಗೇಗೌಡ. ನನ್ನ ತಾತ ನಿಂಗೇಗೌಡರವರಿಗೆ ನನ್ನ ತಂದೆ ಒಬ್ಬರೇ ಮಗ. ನಿಂಗೇಗೌಡ ಅವರ ತಂದೆ ಹೆಸರು ಮರಿಗೌಡ. ಮರಿಗೌಡ ಅವರಿಗೆ ಇಬ್ಬರು ಗಂಡು ಮಕ್ಕಳು , 3 ಜನ ಹೆಣ್ಣು ಮಕ್ಕಳು. ನಿಂಗೇಗೌಡ ಅವರಿಗೆ ಎಷ್ಟು ಮಕ್ಕಳು ಎಂದು ವಕೀಲರಿಗೆ ಮಾಹಿತಿ ಕೊಟ್ಟಿರುತ್ತೇನಾ ಎಂದರೆ ಕೊಟ್ಟಿರುತ್ತೇನೆ. ನನ್ನ ತಂದೆ ತೀರಿಕೊಂಡ ನಂತರ ಕುಟುಂಬದ ಆಸ್ತಿಗಳು ವಿಭಾಗ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಭಾಗಕ್ಕೆ ನನ್ನ ತಾತ ನಿಂಗೇಗೌಡ ಕೂಡ ಸಮ್ಮತಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಇದ್ದಾಗ ತಾಯಿ ಮನೆಗೆ ಹೋಗಿ ಬರುತ್ತಿದ್ದೆ. ನನ್ನ ತಂದೆ ತೀರಿಕೊಂಡ ನಂತರ ಹೊಸ ಮನೆ ಮಿಲ್ ನ ಬಳಿ ಇದ್ದು, ಆ ಮನೆಗೆ ಒಂದರೆಡ ಬಾರಿ ಹೋಗಿ ಬಂದಿರುತ್ತೇನೆ. ಸಾಕ್ಷಿಯು ಒಟ್ಟಿಗೆ ಇದ್ದಾಗ ಕರೆದಾಗ ಹೋಗಿ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಮನೆಯಲ್ಲಿ ಈಗಲೂ ಜಯಣ್ಣ ಅವರ ಹೆಂಡತಿ ಮಕ್ಕಳು ಹಾಗೂ ಶ್ರೀನಿವಾಸ ರವರ ಹೆಂಡತಿ ಮಕ್ಕಳು ಒಟ್ಟಿಗೆ ವಾಸ ಮಾಡುತ್ತಿದ್ದಾರೆ, ಇನ್ನೊಂದು ಮನೆ ಬಿದ್ದು ಹೋಗಿರುತ್ತದೆ. ಶ್ರೀನಿವಾಸ ಮತ್ತು ಜಯಣ್ಣ ಅವರ ಕುಟುಂಬದವರು ಬೇರೆ ಬೇರೆ ಜಮೀನಿನ ವ್ಯವಸಾಯ ಮಾಡುತ್ತಾರೆ, ಆದರೆ ಒಟ್ಟಿಗೆ ಮಾಡುತ್ತಾರಾ ಅಥವಾ ಬೇರೆ ಮಾಡುತ್ತಾರಾ ನನಗೆ ಗೊತ್ತಿಲ್ಲ. ಅವರಿಬ್ಬರು ಬ್ಯಾಂಕಿನಲ್ಲಿ ಬೇರೆ ಬೇರೆ ಸಾಲ ತೆಗೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಾಜರು ಮಾಡಿದ ದಾಖಲೆಗಳ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ಜಯಣ್ಣ ತೀರಿಕೊಂಡು 5-6 ವರ್ಷ ಅಂದರೆ ದಾವೆ ಸಲ್ಲಿಸುವ ಮುಂಚೆ ತೀರಿಕೊಂಡಿರುತ್ತಾರೆ. ಶ್ರೀನಿವಾಸ್ ಈ ದಾವೆ ಸಲ್ಲಿಸಿದ ನಂತರ ತೀರಿಕೊಂಡಿರುತ್ತಾರೆ. 1975 ರಲ್ಲೇ ವಿಭಾಗ ಆಗಿ ಎಲ್ಲರೂ ಬೇರೆ ಬೇರೆಯಾಗಿ ವ್ಯವಸಾಯ ಮಾಡಿಕೊಂಡು ಪ್ರತ್ಯೇಕವಾಗಿ ವಾಸವಾಗಿರುತ್ತಾರೆ. ಎಂದರೆ ಸಾಕ್ಷಿಯು ನಾನು 1976 ರಲ್ಲಿ

ಮದುವೆಯಾಗಿದ್ದು , ಇನ್ನೂ ಇಬ್ಬರು ಸಹೋದರಿಯರು ಇದ್ದು , ಹೇಗೆ ವಿಭಾಗ ಆಗಿರುತ್ತದೆ ಎಂದು ನುಡಿಯುತ್ತಾರೆ.

1975 ರಲ್ಲೇ ವಿಭಾಗ ಆಗಿದ್ದು ನಾನು ಹೇಳಿದ ಹಾಗೆ ಒಟ್ಟು ಕುಟುಂಬದಲ್ಲಿ ವಾಸವಾಗಿರುವುದಿಲ್ಲ ಎಂದರೆ ಸಾಕ್ಷಿಯು ಅವರು ಖಾತೆ ಮಾಡಿಕೊಂಡಿದ್ದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.ಜಯಣ್ಣ ಅವರ ಭಾಗಕ್ಕೆ ಬಂದ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಒಟ್ಟಿಗೆ ಮಾರಾಟ ಮಾಡಿರುತ್ತಾರೋ ಇಲ್ಲ ಬೇರೆ ಮಾರಾಗಿ ಮಾಡಿರುತ್ತಾರೋ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಖರೀದಿದಾರರು ಅವರ ಹೆಸರಿಗೆ ಖಾತೆ ಮಾಡಿಕೊಂಡು ಸ್ವಾಧೀನದಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಎಲ್ಲೂ ಕೂಡ ಶ್ರೀನಿವಾಸ್ ಮತ್ತು ಜಯಣ್ಣ ಅವರ ಹೆಸರಿನಲ್ಲಿರುವ ಖಾತೆಯನ್ನು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಈ ದಾವೆ ಅಲ್ಲದೆ ನಾನು ಬೇರೆ ಎಲ್ಲೂ ಪ್ರಶ್ನೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಹಿಂದೆಯೇ ವಿಭಾಗ ಆಗಿರುವ ಕಾರಣ ನನಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲದೆ ಇದ್ದರೂ ಕೂಡ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.